ಈ ಕಷ್ಟವನ್ನು ಪರಿಹಾರ ಮಾಡುವುದಾದರೆ ಆ ಭಾಸ್ಕರರಾಯರು ಒಬ್ಬರು ಮಾತ್ರಾ. ಅವರನ್ನೇ ಮೊರೆ ಹೋಗಬೇಕು. ಖಂಡಿತಾ ಅವರು ನಮ್ಮ ಕಷ್ಟ ಪರಿಹರಿಸುತ್ತಾರೆ. ಅದಕ್ಕೆ ನೀನು ನನ್ನ ಪರವಾಗಿ ವಳಗೆರೆಗೆ ಒಮ್ಮೆ ಹೋಗಿ ಆ ರಾಯರ ಬಳಿ ಎಲ್ಲವನ್ನೂ ಹೇಳಿಕೊಂಡು ಸಹಾಯ ಮಾಡುವಂತೆ ಕೇಳಿಕೊಂಡು ಬರಬೇಕು.'

'ನೀನೇ ಯಾಕೆ ಹೋಗಬಾರದು ಚಿಕ್ಕಮ್ಮಾ?' ಕೇಳಿದೆ.

'ನಾನೇನಾದರೂ ಇನ್ನೊಮ್ಮೆ ಆ ವಳಗೆರೆಗೆ ಕಾಲಿಟ್ಟರೆ ನನ್ನ ಕಾಲು ಮುರಿಯುವುದಾಗಿ ನಿನ್ನ ಚಿಕ್ಕಪ್ಪ ಹೇಳಿದ್ದಾರೆ. ನಿನ್ನ ತಂಗಿ ಮಂಗಲಾ ಕೂಡಾ ನಾನು ರಾಯರನ್ನು ಕಾಣಲು ಹೋದೆ ಅಂತಾದರೆ ತಾನು ವಿಷ ಕುಡಿಯುವುದಾಗಿ ಹೆದರಿಸುತ್ತಿದ್ದಾಳೆ. ಎಷ್ಟೇ ಗುಟ್ಟಿನಲ್ಲಿ ನಾನು ವಳಗೆರೆಗೆ ಹೋಗಿಬಂದರೂ ಅಪ್ಪ ಮಗಳಿಗೆ ವಿಷಯ ತಿಳಿಯುತ್ತದೆ. ಒಂದು ಕಷ್ಟ ಪರಿಹರಿಸಲು ಪ್ರಯತ್ನಪಟ್ಟು ಮತ್ತೊಂದು ಕಷ್ಟವನ್ನು ಮೈಮೇಲೆ ಎಳೆದುಕೊಂಡಂತೆ ಆಗುತ್ತದೆ. ಅದಕ್ಕಾಗಿ ನೀನೇ ಒಮ್ಮೆ ಹೋಗಿ ಬರುವುದು ಒಳ್ಳೆಯದು.'

'ನೋಡೋಣ. ಭಾನುವಾರ ಆಫೀಸ್‌ಗೆ ರಜಾ. ಅಂದು ಹೋಗಿ ಬರಲು ಸಾಧ್ಯವೇ ನೋಡುತ್ತೇನೆ' ಎಂದೆ.

'ನಾನೊಬ್ಬನೇ ವಳಗೆರೆಗೆ ಹೋಗುವುದರಿಂದ ಪ್ರಯೋಜನ ಆಗಲಾರದು. ಹೆಂಗಸರ ಬಗ್ಗೆ ಆ ಭಾಸ್ಕರರಾಯರಿಗೆ ಹೆಚ್ಚಿನ ಕಕ್ಕುಲಾತಿ. ಹೆಂಗಸರ ಅಳಲನ್ನು ಆಲಿಸಿ ಅವರಿಗೆ ನೆರವಾಗುವ ಗುಣ ಆತನದು ಎಂದು ಆನಂದ ಹೇಳಿದ್ದಾನೆ. ಚಿಕ್ಕಮ್ಮ ಅವರ ಬಳಿ ಹೋಗಿ ಹೇಳಿಕೊಂಡಿದ್ದರೆ ಖಂಡಿತಕ್ಕೂ ಆ ಭಾಸ್ಕರರಾಯರು ಯಾವುದಾದರೊಂದು ಪರಿಹಾರ ಸೂಚಿಸುತ್ತಿದ್ದರು. ಚಿಕ್ಕಮ್ಮ ಅವರ ಬಳಿ ಹೋಗುವುದಕ್ಕೆ ಚಿಕ್ಕಪ್ಪ ಹಾಗೂ ಮಂಗಲಾ ಬಿಲ್ಕುಲ್ ಒಪ್ಪುತ್ತಿಲ್ಲ. ನಾನೊಬ್ಬನೇ ಆ ಭಾಸ್ಕರರಾಯರ ಬಳಿ ಹೋದರೆ ಅವರ ಭೇಟಿ ಆದೀತು ಎನ್ನುವಂತಿಲ್ಲ. ಜಗುಲಿಯಲ್ಲಿರುವ ಆ ಠೊಣಪ ನನ್ನನ್ನು ಭಾಸ್ಕರರಾಯರ ಬಳಿ ಕಳುಹಿಸಿಕೊಡುತ್ತಾನೆ ಎನ್ನಲಾಗದು' ವಿಚಾರ ಮಾಡಿದೆ ನಾನು. ಕೊನೆಗೊಂದು ನಿರ್ಣಯಕ್ಕೆ ಬಂದೆ: 'ಹೇಗಾದರೂ ಮಾಡಿ ಮಂಗಲಾಳನ್ನು ಒಪ್ಪಿಸಿ ನನ್ನೊಂದಿಗೆ ಕರೆದೊಯ್ಯುವುದು. ಅವಳಿಂದ ಅವಳ ಅಮ್ಮ ಅಪ್ಪನಿಗೆ ಒದಗಿರುವ ಕಷ್ಟವನ್ನು ಹೇಳಿಸಿ ನೆರವಾಗಲು ಆ ಭಾಸ್ಕರರಾಯರನ್ನು ಕೋರುವುದು.'

ಬುಡಪೆಟ್ಟಿಗೆ ಮಂಗಲಾ ಈ ಬಗ್ಗೆ ಒಪ್ಪಲಾರಳು ಎಂಬುದೂ ನನಗೆ ಗೊತ್ತಿತ್ತು. ಆದರೂ ಪ್ರಯತ್ನಿಸೋಣ ಎನ್ನಿಸಿತು.

ನಾನು ಅಂದುಕೊಂಡಂತೆಯೇ ಮಂಗಲಾ ಮೊದಲಿಗೆ ಒಪ್ಪಲಿಲ್ಲ: 'ಆ ಕಾಮುಕನ ಬಳಿ ನಾನು ಬರುವುದೇ. ನಾವು ಬೀದಿಯಲ್ಲಿ ಬಿದ್ದರೂ ಅಷ್ಟೇ; ನೀನು ನಮಗೆ ಆಶ್ರಯ ನೀಡದೇ ಇದ್ದರೂ ಸರಿಯೇ. ನಾನಂತೂ ಆ ಭಾಸ್ಕರರಾಯರನ್ನು ಭೇಟಿ ಮಾಡಲು ಬರುವವಳಲ್ಲ; ಅವರ ಬಳಿ ಪರಿಹಾರ ಯಾಚಿಸುವವಳೂ ಅಲ್ಲ' ಎಂದು ಬಿಟ್ಟಳು ಖಡಾಖಂಡಿತವಾಗಿ.

ಬಹು ಬಗೆಯಲ್ಲಿ ಹೇಳಿದೆ. 'ನೀನೇನೂ ಭಯಪಡುವ ಅಗತ್ಯವಿಲ್ಲ. ಅವರಿಂದ ನಿನಗೆ ಯಾವುದೇ ತೊಂದರೆ ಆಗದಿರುವಂತೆ ನಾನು ನೋಡಿಕೊಳ್ಳುತ್ತೇನೆ. ನಿನ್ನ ಮಾನದ ರಕ್ಷಣೆ ನನ್ನದು' ಎಂದೆ.

ಬಹಳಷ್ಟು ಹೇಳಿದ ನಂತರ ಮಂಗಲಾ ನನ್ನೊಂದಿಗೆ ವಳಗೆರೆಗೆ ಬರಲು ಸಮ್ಮತಿಸಿದಳು.

'ಆದರೆ, ಈ ವಿಷಯ ಗುಟ್ಟಾಗಿರಲಿ. ನಿನ್ನ ಅಮ್ಮನಿಗೂ ತಿಳಿಯಬಾರದು; ಅಪ್ಪನಿಗೂ ತಿಳಿಯಬಾರದು' ಎಂದು ಮಂಗಲಾಳಿಗೆ ತಾಕೀತು ಮಾಡಿದೆ.